ಕರ್ನಾಟಕ ವಿಧಾನ ಸಭೆ

ಶುಕ್ರವಾರ, 25ನೇ ಮಾರ್ಚ್ 1983/ಚೈತ್ರ 4, 1905

ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು —(ಶ್ರೀ ವೀರಣ್ಣ) ಪೀಠವನ್ನು ಅಲಂಕರಿಸಿದ್ದರು

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿಮಾತಿನ ಉತ್ತರಗಳು

Refund of Sales Tax to the Agricultural Produce Processing Co-operative Society Sankeshwar.

144 Sri Mallaragouda S. Patil (Sankeshwar):--

Will the Minister for Co-operation be pleased to state :--

a) the action taken by the Government towards refund of Sales Tax to the Agricultural Produce Processing Co-operative Society Ltd. Sankeshwar ;

b) the total amount of refund due to the Society by the Sales Tax Office ;

c) the period within which this amount would be refunded ;

d) the reasons for the delay ?

ಉಪಾಧ್ಯಕ್ಷರು.—ಪ್ರಶ್ನೆ 145 ಮತ್ತು 147 ಒಟ್ಟಿಗೆ ತೆಗೆದುಕೊಳ್ಳಲಾಗುವುದು.

ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿ ಚುನಾವಣೆಗಳ ಬಗ್ಗೆ

145 ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).--ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ತಮ್ಮ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಎಷ್ಟು ವರ್ಷಗಳಿಂದ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಚುನಾವಣೆಗಳು ನಡೆಯಬೇಕಾಗಿದೆ ? ಎಷ್ಟು ವರ್ಷಗಳಿಂದ ಚುನಾವಣೆ ನಡೆದಿಲ್ಲ ಎಂಬ ವಿವರಗಳನ್ನು ತಿಳಿಸುವುದು ;

ಆ) ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿ ಚುನಾವಣೆಗಳನ್ನು ರಾಜ್ಯಾದಂತ ನಡೆಸಲು ಸರ್ಕಾರ ನಿರ್ಧರಿಸಿದೆಯೆ ;

ಇ) ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳ ಚುನಾವಣೆಗಳನ್ನು ಏಕ ಕಾಲದಲ್ಲಿ ನಡೆಸುವಂತೆ ಸರಕಾರ ಕಾರ್ಯಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಡಳಿತ ಸಚಿವರು).--

ಅ) ವಿವರಗಳನ್ನು ಅನುಬಂಧ 1 ಮತ್ತು 2 ರಲ್ಲಿ ನೀಡಿದೆ.

ಆ) ಹೌದು

ಇ) 1, ಆಡಳಿತಾಧಿಕಾರಿಗಳು ನೇಮಕಗೊಂಡ ಪುರಸಭೆ ಹಾಗೂ ನಗರಸಭೆಗಳಿಗೆ ಮತ್ತು ಮಹಾನಗರಸಭೆಗಳಿಗೆ ಶೀಘ್ರದಲ್ಲಿಯೇ ಮಾಡಲು ಎಲ್ಲಾ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

2. ಚುನಾಯಿತ ಪುರಸಭೆಗಳು ಇದ್ದಕಡೆ ಅವುಗಳ ಕಾಲಾವಧಿ ಮುಗಿದಂತೆಲ್ಲಾ ಚುನಾವಣೆಗಳನ್ನು ನಡೆಸಲಾಗುವುದು.

Reply to be included